**ಓ.ಎಸ್ ನಂ. 39/2023 ಡಿ.ಡಬ್ಲ್ಯೂ-1 (ಹೆಚ್ ಸಿ ನರಸಿಂಹಮೂರ್ತಿ)**

**ಸಾಕ್ಷಿಯನ್ನು ದಿನಾಂಕಃ 01.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ ಸಿ ಎಸ್ ವಕೀಲರಿಂದಃ**

1. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಗೊತ್ತಿರುತ್ತದೆ. ನಾನು ಬಿ ಎ ಪದವಿಯವರೆಗೆ ಓದಿರುತ್ತೇನೆ. ವಾದಿ ರವರು ಯಾವಾ ಸ. ನಂಬರಿಗೆ ಸಂಬಂದಿಸಿದಂತೆ ದಾವೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸ. ನಂ. ಜಮೀನಿಗೆ ದಾವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಜಮೀನುಗಳು ಎಂದರೆ ಉಯ್ಯಂಬಳ್ಳಿ ಗ್ರಾಮದ ಸ. ನಂ. 136/1, 136/3 ಜಮೀನುಗಳು ಇರುತ್ತವೆ. ಉಯ್ಯಂಬಳ್ಳಿ ಗ್ರಾಮ ಮತ್ತು ಬಿದರಹಳ್ಳಿ ಗ್ರಾಮ ಬೇರೆ ಬೇರೆ ಎಂದರೆ ಸರಿ. ಸಾಕ್ಷಿಗೆ ಬಿದರಹಳ್ಳಿ ಗ್ರಾಮದ ಸ. ನಂ 83 ರಲ್ಲಿ 4 ಎಕರೆ ಜಮಿನನ್ನು ಅಂದರೆ ದಾವಾಸ್ತಿಯನ್ನು ನೀವು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ದಾವಾಸ್ತಿಯಲ್ಲಿ ತೋರಿಸಿರುವ ಚಕ್ಕು ಬಂದಿ ನಮ್ಮ ಜಮೀನಿಗೆ ಸಂಬಂಧಿಸಿದ ಚಕ್ಕು ಬಂದಿ ಆಗಿರುತ್ತದೆ ಆದುದರಿಂದ ಸದರಿ ಪ್ರಶ್ನೆ ಯನ್ನು ಕೇಳಲು ಬರುವುದಿಲ್ಲ ಎಂದು ನುಡಿದಿದ್ದು ಸದರಿ ತಕರಾರು ಅಸಂಬದ್ಧ ಎಂದು ತಳ್ಳಿ ಹಾಕಿ ಮುಂದಿನ ಪಾಟೀ ಸವಾಲಿಗೆ ಅವಕಾಶ ಮಾಡಲಾಗಿರುತ್ತದೆ.

2. ಸ. ನಂ. 136/1 ಮತ್ತು 136/3 ಜಮೀನನ್ನು ಖರೀದಿ ಮಾಡುವ ಸಮಯ ಸದರಿ ಕ್ರಯ ಪತ್ರದ ಷೆಡ್ಯೂಲಿ ಸ್ವತ್ತಿನಲ್ಲಿ ದಾವಾಸ್ತಿಯಲ್ಲಿ ತೋರಿಸಿರುವ ಚಕ್ಕುಬಂದಿಯನ್ನೇ ತೋರಿಸಿ ಖರೀದಿಸಲಾಗಿರುತ್ತದೆ, ಸಾಕ್ಷಿಯು ಮುಂದುವರಿದು ನಾನು ಖರೀದಿಸುವ ಸಮಯದಲ್ಲಿ ದಕ್ಷಿಣ ಭಾಗದ ಕಡೆ ಮತ್ತು ಪಶ್ಚಿಮದ ಕಡೆಯಲ್ಲಿ

ಸ್ವಲ್ಪ ಕುರುಚಲು ಕಾಡು ಇರುತ್ತದೆ ಮತ್ತು ಅದು ಯಾರಿಗೆ ಸೇರಿರುತ್ತದೆ ಎಂದು ಹೇಳಿ ಬರೆಸಲಾಗಿದ್ದು ನಂತರ ಸರ್ವೆಮಾಡಿ ಪ್ರಸ್ತುತ ಯಾರು ವ್ಯವಸಾಯ ಮಾಡಿಕೊಂಡಿರುತ್ತಾರೆ ಅದರ ಚಕ್ಕು ಬಂದಿಯನ್ನು ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿಸಿದಂತಹ ಮೇಲೆ ಹೇಳಿದ ಎರಡು ಆಸ್ತಿಯು ನನಗೆ ಮಾರಾಟ ಮಾಡಿದವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ.

3. ನನ್ನ ಲಿಖಿತ ಹೇಳಿಕೆಯನ್ನು ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿ ಯನ್ನು ನೀಡಿರುತ್ತೇನೆ. ನನ್ನ ತಕರಾರಿನಲ್ಲಿ ನನಗೆ ಮಾರಾಟ ಮಾಡಿದ ಮಾರಾಟಗಾರರಿಗೆ ಸರ್ಕಾರದಿಂದ ಮೂಲ ಮಂಜೂರಾತಿಯಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಲಿಖಿತ ಹೇಳಿಕೆಯನ್ನು ಸಲ್ಲಿಸುವ ಸಮಯದಲ್ಲಿ ನನಗೆ ಮಾರಾಟ ಮಾಡಿದವರಿಗೆ ಸರ್ಕಾರದಿಂದ ಮಂಜೂರಾದ ದಾಖಲಾತಿಯನ್ನು ತೆಗೆದುಕೊಂಡಿರಲಿಲ್ಲ. ಸದರಿ ಉಯ್ಯಂಬಳ್ಳಿ ಗ್ರಾಮದ ಸ. ನಂ. 136/1 ಮತ್ತು 136/3 ಜಮೀನುಗಳು ದುರಸ್ತಿಯಾಗಿರುತ್ತವೆ. ಮೇಲೆ ಹೇಳಿದಂತಹ ಸರ್ಕಾರದಿಂದ ಮಂಜೂರಾಜದಂತಹ ಈ ಎರಡು ಜಮೀನುಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಜಮೀನುಗಳು ಎಂದರೆ ಸರಿ. ಸದರಿ ಜಮೀನುಗಳನ್ನು ಖರಿದಿಸುವ ಸಮಯದಲ್ಲಿ ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದುಕೊಂಡಿರುತ್ತೀರಾ ಎಂದರೆ ಅದರ ಅವಶ್ಯಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸ. ನಂ. 136/1 ಮತ್ತು 136/3 ಜಮೀನಿನಲ್ಲಿ ಕಬಿನಿ ಜಲಾಶಯ ಪುನರ್ವಸತಿಗಾಗಿ ಭೂ ಸ್ವಾಧೀನ ಆಗಿರುತ್ತದೆ ಆದುದ್ದರಿಂದ ನೀವು 11 ಇ ಸ್ಕೆಚ್ಚನ್ನು ಪಡೆದು ಖರೀದಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ 10 ಕ್ರಯಪತ್ರದಲ್ಲಿ 11 ಇ ಸ್ಕೆಚ್ಚನ್ನು ಪಡೆದಿದ್ದ ಬಗ್ಗೆ ತಿಳಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ 11 ಇ ಸ್ಕೆಚ್ಚನ್ನು ಸಹ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಅವರೇ ಹಾಜರುಪಡಿಸಿರುವಂತಹ

ದಾಖಲಾತಿಗಳನ್ನು ತೋರಿಸಿ ಇದರಲ್ಲಿ 11 ಇ ಸ್ಕೆಚ್ಚನ್ನು ತೋರಿಸಿ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ಪರಿಶೀಲಿಸಿ ಸದರಿ ದಾಖಲಾತಿಗಳಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸ. ನಂ. 136/1 ಮತ್ತು 136/3 ಜಮೀನುಗಳನ್ನು ಖರೀದಿಸುವ ಪೂರ್ವದಲ್ಲಿ 3 ತಿಂಗಳ ಮುಂಚೆ ಖಾಸಗಿ ಕಡೆಯಿಂದ ಸರ್ವೆಯನ್ನು ಮಾಡಿಸಲಾಗಿರುತ್ತದೆ. ನಂತರದಲ್ಲಿ ಕ್ರಯಪತ್ರ ನೊಂದಣಿಯಾದ 3 ತಿಂಗಳ ನಂತರ ಕಾನುನುಬದ್ಧವಾಗಿ ಸರ್ವೆಯನ್ನು ಮಾಡಿಸಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯೇ ಸರ್ವೆಯನ್ನು ಮಾಡಿಸಿ ಬೇಲಿಯನ್ನು ಹಾಕಿಸಿರುತ್ತೇನೆ. ಸದರಿ ಸರ್ವೆ ದಾಖಲಾತಿ ಗಳನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ